

'ಸುಧಾ'ದಲ್ಲಿ ಪ್ರಕಟಗೊಂಡ ಈ ಬರಹದ ಲೇಖಕರ ಮೆಂಡೆಲ್ ಲೇಖನವನ್ನು ಪ್ರದರ್ಶಿಸುತ್ತಿರುವ ಸ್ವಯಂ ಸೇವಕಿ

ಮನೆಯ ಸುತ್ತೆಲ್ಲಾ ಡಾರ್ವಿನ್ನನ 'ಹಸಿರು ಮನೆ' (Green House), ಪಾರಿವಾಳ ಬೆಳೆಸಿದ ಜಾಗ ಇತ್ಯಾದಿ, ಇತ್ಯಾದಿ. ಸುತ್ತೆಲ್ಲಾ ಹಸಿರು, ಎಲ್ಲೆಲ್ಲಿಯೂ ಹೂವುಗಳು. ಮನೆಯ ಹಿಂದಿದ್ದ ಕುರ್ಚಿಗಳಲ್ಲಿ ತುಸುಕಾಲ ಕೂತೆವು. ಪ್ರಾಯಶಃ ಡಾರ್ವಿನ್ ಕೂಡ ಅಲ್ಲಿಯೇ ಕುಳಿತು ಆ ಸೊಬಗನ್ನು ಮೆಚ್ಚಿರಬೇಕು! ಅಲ್ಲಿ ಓರ್ವ ಮಹಿಳೆ ತನ್ನ ಹೆಣ್ಣುಮಕ್ಕಳಿಗೆ ಒಂದು ಗಿಡದ ಮುಂದೆ ನಿಂತು ಹೂವು, ತಳಿ ಮಾಡುವುದು ಇತ್ಯಾದಿಗಳನ್ನು ವಿವರಿಸುತ್ತಿದ್ದಳು. ಎಷ್ಟು ಪುಣ್ಯವಂತರು ಆ ಮಕ್ಕಳು! ಎಷ್ಟು ಜನ ತಾಯಿಯರು ಹಾಗೆ ಮಾಡಿಯಾರು!

ನಾವು ಭೇಟಿಕೊಟ್ಟ ಡಾರ್ವಿನ್ನನಿಗೆ ಸಂಬಂಧಿಸಿದ ಮತ್ತೊಂದು ಸ್ಥಳ ಕೇಂಬ್ರಿಡ್ಜ್ ವಿ.ವಿ. ಟ್ರೈನಿನಲ್ಲಿ ಒಂದು ಗಂಟೆಯ ಪ್ರಯಾಣ. ಮತ್ತೆ ವಿಶ್ವವಿದ್ಯಾಲಯದ ಮಧ್ಯಕ್ಕೆ ಬಸ್. ಇಲ್ಲಿರುವ ಅನೇಕ ಕಾಲೇಜುಗಳಲ್ಲಿ ಒಂದು ಕ್ರೈಸ್ಟ್ ಕಾಲೇಜು. ಇಲ್ಲಿ ಚಾರ್ಲ್ಸ್ ಡಾರ್ವಿನ್ 1830–31ರಲ್ಲಿ ವಿದ್ಯಾರ್ಥಿಯಾಗಿದ್ದು, ಪದವಿಯನ್ನು ಪಡೆದ. ತಾನು ಕೈಗೊಂಡ ಐದು ವರ್ಷಗಳ ವಿಶ್ವಪರ್ಯಟನಕ್ಕೆ ಡಾರ್ವಿನ್‌ಗೆ ಸ್ಫೂರ್ತಿ ದೊರೆತದ್ದು ಇಲ್ಲಿಯ ಪ್ರೊಫೆಸರ್ ಹೆನ್ಸ್‌ಲೋ ಮತ್ತು ಸೆಡ್ಜ್ ವಿಕ್ ಅವರುಗಳಿಂದ.

ಇದರ ಪುಸ್ತಕ ಭಂಡಾರಕ್ಕೆ ನಾವು ಹಿಂದೆ ನನ್ನ ಕನ್ನಡದ ಡಾರ್ವಿನ್ ಪುಸ್ತಕವನ್ನು ನೀಡಿದ್ದೆ. ಅದರ ಲೈಬ್ರೆರಿಯನ್, ಡೇವಿಡ್ ವಾಗ್ ಸ್ಟಾಫ್ ಬಹು ನಮ್ರರಾಗಿ ಸ್ವೀಕರಿಸಿ ಕ್ಯಾಟಲಾಗ್ ಮಾಡಿಸಿ ಇರಿಸಿದ್ದರು. ಈಗ ನಾವು ಅಲ್ಲಿ ಹೋದಾಗ ಇದ್ದ ಅಧಿಕಾರಿಗಳು ಬೇರೆ. ಆದರೂ ನಮ್ಮನ್ನು ಬರಮಾಡಿಕೊಂಡು, ಹೊಸ ಪುಸ್ತಕವನ್ನು ಸ್ವೀಕರಿಸಿದರು. ಮುಖ್ಯ ಕಟ್ಟಡದ ಹಿಂದಿರುವ ಡಾರ್ವಿನ್ನನ ಪ್ರತಿಮೆಯನ್ನು ನೋಡಿದೆವು. ಅಲ್ಲಿಯ ತೋಟದಲ್ಲಿ ಅಡ್ಡಾಡಿದರೆ ಯಾವ ಭಾರತೀಯನೂ ಹೆಮ್ಮೆ ಪಡಬೇಕಾದ ಜಗದೀಶ್ ಚಂದ್ರ ಬೋಸ್ ಅವರ ಪ್ರತಿಮೆಯನ್ನು ನೋಡಬಹುದು.

ಡಾರ್ವಿನ್ ಆಗರ್ಭ ಶ್ರೀಮಂತ. ತಂದೆ ಮತ್ತು ತಾತ, ವೈದ್ಯರು. ಇವನ ಮಾವನ ತಂದೆ ವೆಡ್ಜ್ ವುಡ್. ಅವನ ಹೆಸರಿನಲ್ಲಿಯೇ ಪ್ರಖ್ಯಾತವಾಗಿರುವ, ಅಡುಗೆ ಮನೆಗೆ ಬೇಕಾದ ಪಿಂಗಾಣಿ ಸಲಕರಣೆಗಳನ್ನು ತಯಾರಿಸುವ ಉದ್ದಿಮೆ ಹೊಂದಿದ್ದ. ಯೂರೋಪಿನ ಅರಮನೆಗಳಲ್ಲಿ ವೆಡ್ಜ್ ವುಡ್ ಉಪಕರಣಗಳನ್ನು ಹೊಂದಿರುವುದು ಒಂದು ಹಿರಿಮೆ ಎನ್ನಿಸಿತ್ತು. ಡಾರ್ವಿನ್ ಮದುವೆಯಾದಾಗ ಅವನ ತಂದೆ ಅವನಿಗೆ ನೀಡಿದ ಉಡುಗೊರೆ – ಸಂಸಾರದ ವೆಚ್ಚಕ್ಕಾಗಿ ವರ್ಷಕ್ಕೆ 400 (ಇಂದಿನ 42,000) ಪೌಂಡುಗಳು ಮತ್ತು ಮನೆ ಕಟ್ಟಿಕೊಳ್ಳಲು ಹಣ. ಹೀಗಾಗಿ ಅವನು ಜೀವನೋಪಾಯಕ್ಕಾಗಿ ಕೆಲಸ ಮಾಡಲಿಲ್ಲ. ಯಾವುದೇ ವಿಶ್ವವಿದ್ಯಾಲಯದಲ್ಲಿಯೂ ಸ್ಥಾನ ಬೇಡಲಿಲ್ಲ. ಅವನು ಐದು ವರ್ಷ ಬೀಗಲ್ ಎಂಬ ಹಡಗಿನಲ್ಲಿ ದಕ್ಷಿಣ ಅಮೆರಿಕ, ಆಫ್ರಿಕಾ, ಆಸ್ಟ್ರೇಲಿಯಾ ಮೊದಲಾದ ದೇಶಗಳಲ್ಲಿ ಸಂಚರಿಸಿದ. ನಂತರ ಮನೆ ಬಿಟ್ಟವನಲ್ಲ. ಅಲ್ಲಿಂದಲೇ ಅವನ ಎಲ್ಲಾ ಸಂಶೋಧನೆಗಳು ಮತ್ತು ಅಧ್ಯಯನ.

ಹತ್ತಾರು ಗ್ರಂಥಗಳನ್ನು ರಚಿಸಿದ ಅವನಿಗೆ ಅಪಾರ ಮಾಹಿತಿಯ ಅವಶ್ಯಕತೆ ಇತ್ತು – ಪಾರಿವಾಳಗಳ ಬಗ್ಗೆ, ಕುದುರೆಗಳನ್ನು ಮಿಶ್ರತಳಿ ಮಾಡುವುದರ ಬಗ್ಗೆ, ಆರ್ಕಿಡ್‌ಗಳ ಬಗ್ಗೆ, ದನ, ನಾಯಿಗಳ ಬಗ್ಗೆ, ಇತ್ಯಾದಿ. ಇದಕ್ಕಾಗಿ ಡಾರ್ವಿನ್ ಪತ್ರ ವ್ಯವಹಾರದಲ್ಲಿ ತೊಡಗಿದ. ದೊರಕಿದ ಮಾಹಿತಿಯನ್ನು ಕ್ರೋಡೀಕರಿಸಿ ತನ್ನ ಹೊತ್ತಿಗೆಗಳನ್ನು ರಚಿಸಿದ, ಸಿದ್ಧಾಂತಗಳನ್ನು ರೂಪಿಸಿದ. ಅವನು ತನ್ನ ಜೀವಿತಕಾಲದಲ್ಲಿ ಎಷ್ಟು ಪತ್ರಗಳನ್ನು ಬರೆದಿರಬಹುದು? ಊಹಿಸಿ... 15,000! ಇವುಗಳಲ್ಲಿ ಅರ್ಧದಷ್ಟನ್ನು ತಾನೇ ಬರೆದ. ಮಿಕ್ಕವು ಉಕ್ತಲೇಖನ.

ಡಾರ್ವಿನ್ ಬರೆದ ಮತ್ತು ಸ್ವೀಕರಿಸಿದ ಪತ್ರಗಳನ್ನು ಸಂಗ್ರಹಿಸಿ ಪ್ರಕಟಿಸುವ ಯೋಜನೆಯೇ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ 'ಡಾರ್ವಿನ್ ಕರೆಸ್ಪಾಂಡೆನ್ಸ್ ಪ್ರಾಜೆಕ್ಟ್'. ಅದರ ಕಾರ್ಯಕರ್ತರನ್ನು ಭೇಟಿ ಮಾಡುವ ಹಂಬಲದಿಂದ, ಅದು ಜರುಗುತ್ತಿರುವ ಕೇಂಬ್ರಿಡ್ಜ್‌ನ ಮುಖ್ಯ ಪುಸ್ತಕ ಭಂಡಾರಕ್ಕೆ ಧಾವಿಸಿದೆವು. ಆದರೆ ಉದ್ಯೋಗಿಗಳಾರೂ ಇರಲಿಲ್ಲ. ಅವರಿಗೆ ಇ–ಮೇಲ್ ಕಳಿಸಿದಾಗ ಬಂದ ಉತ್ತರ: 'ನೀವು ಬರುವುದು ಬಹಳ ಸಂತೋಷ. ಸೋಮವಾರ ಬನ್ನಿ'.

ನಾವು ಮತ್ತೊಮ್ಮೆ ಕೇಂಬ್ರಿಡ್ಜ್ ವಿಶ್ವವಿದ್ಯಾಲಯಕ್ಕೆ ಹೋದೆವು. ಅಲ್ಲಿ ಡಾರ್ವಿನ್ ಕುರಿತ ಒಂದು ಪ್ರದರ್ಶನ: 'ಸಂಭಾಷಣೆಯಲ್ಲಿ ಡಾರ್ವಿನ್' (Darwin in Conversation). ಒಳಹೊಕ್ಕರೆ ಅದೊಂದು ಬೇರೆಯ ಲೋಕ. ಡಾರ್ವಿನ್ನನ ಅನೇಕ ಪತ್ರಗಳನ್ನು ನಮ್ಮ ಮುಂದೆ ಇರಿಸಿದ್ದಾರೆ. ವಿವಿಧ ಚಿತ್ರಗಳು ಬೇರೆ! ಉದಾಹರಣೆಗೆ ತನ್ನ ಐದು ವರ್ಷಗಳ ಹಡಗು ಪ್ರಯಾಣವನ್ನು ಮುಗಿಸಿದ ಡಾರ್ವಿನ್ ತಾನು ಕಂಡ ಪ್ರಾಣಿ ಪ್ರಭೇದಗಳ ಬಗ್ಗೆ, ವೈವಿಧ್ಯಗಳ ಬಗ್ಗೆ ಆಲೋಚಿಸುತ್ತಾ ಇದ್ದಾಗ ಅವನಿಗೆ ಹೊಳೆಯಿತು – ಪ್ರಾಯಶಃ ಜೀವ ಒಂದು ಕಣದಿಂದ ಸರಳವಾಗಿ ಉದ್ಭವಿಸಿತು. ನಂತರ ಅದು ಮರದಂತೆ ಬೆಳೆಯಿತು. ಅದರ ಟೊಂಗೆ, ಟಿಸಿಲುಗಳೇ ನಾವು ಕಾಣುವ ವಿವಿಧ ಪ್ರಾಣಿಗಳು, ಮನುಷ್ಯ ಕೂಡ. ಕೂಡಲೇ ಅವನು ತನ್ನ ಮುಂದಿದ್ದ ನೋಟ್‌ಬುಕ್ಕಿನಲ್ಲಿ'ನನಗೆಹೀಗನ್ನಿಸುತ್ತಿದೆ, (I think)' ಎಂದು ಬರೆದು ಒಂದು ವೃಕ್ಷವನ್ನೂ ಚಿತ್ರಿಸಿದ. ಅದೇ ಅವನ 'ಆರಿಜಿನ್ ಆಫ್ ಸ್ಪೀಸೀಸ್' ಸಿದ್ಧಾಂತಕ್ಕೆ ಮೂಲಧಾತುವಾಯಿತು. ಆ ನೋಟ್ ಪುಸ್ತಕವನ್ನು ಇಲ್ಲಿ ಪ್ರದರ್ಶಿಸಲಾಗಿದೆ.

ನಮ್ಮನ್ನು ಪುಸ್ತಕ ಭಂಡಾರದ ಮೇಲಿದ್ದ ಕಚೇರಿಗೆ ಕೊಂಡೊಯ್ಯಲಾಯಿತು. ಈಗ ಅಲ್ಲಿ ಉಳಿದಿದ್ದವರು ಇಬ್ಬರು ಮಾತ್ರ. ನನ್ನ ಇಂಗ್ಲಿಷ್ ಮತ್ತು ಕನ್ನಡ ಪುಸ್ತಕಗಳನ್ನು ನೋಡಿ ಸಂತೋಷಪಟ್ಟರು. ಅವರ ಸಾಹಸದ ಬಗ್ಗೆ ಮಾತನಾಡಿದರು. 'ನಮಗೆ ಡಾರ್ವಿನ್ನನ ಬಳಗದವರು, ಸ್ನೇಹಿತರು ಮತ್ತು ಇತರರು ಅನೇಕಾನೇಕ ಪತ್ರಗಳನ್ನು ನೀಡಿದರು. ಕೆಲವೊಮ್ಮೆ ಅದು ಯಾರು ಯಾರಿಗೆ ಬರೆದ ಪತ್ರ ಎಂದು ನಿರ್ಧರಿಸುವುದೇ ಕಷ್ಟವಾಯಿತು. ಡಾರ್ವಿನ್ ಬರೆದ ಪತ್ರಕ್ಕೆ ಅವನ ಸಹಿ ಇರುತ್ತಿತ್ತು. ಆದರೆ ಅವನು ಯಾರಿಗೆ ಈ ಪತ್ರ ಬರೆದ ಎನ್ನುವುದು ತಿಳಿಯುತ್ತಿರಲಿಲ್ಲ. ಪ್ರತಿಯೊಂದೂ 'ಡಿಯರ್ ಸರ್' ಎಂದೇ ಪ್ರಾರಂಭವಾಗುತ್ತದೆ! ಹೆಸರು ಇರುವುದಿಲ್ಲ. ಯಾವ ಕಾಗದ ಮತ್ತಾವ ಕಾಗದಕ್ಕೆ ಉತ್ತರ ಎಂಬುದನ್ನೂ ಪತ್ತೆ ಹಚ್ಚಬೇಕಾಯಿತು. ಅಂತೂ ಹತ್ತು ಸಂಪುಟಗಳನ್ನು ಪ್ರಕಟಿಸಿದ್ದೇವೆ. ಸಾಕಷ್ಟು ಮಂದಿ ನಮ್ಮ ಕೆಲಸ ಮೆಚ್ಚಿದ್ದಾರೆ' ಎಂದರು.

ನಾವು ಹೊರಟಾಗ 'ನಿಮಗೊಂದು ಉಡುಗೊರೆ' ಎಂದು ಚಾರ್ಲ್ಸ್ ಡಾರ್ವಿನ್ ಬರೆದ ಪತ್ರವೊಂದನ್ನು ವಿಶೇಷ ಕಾಗದದ ಮೇಲೆ ಮುದ್ರಿಸಿ ನನಗೆ ನೀಡಿದರು. ಮನೆಗೆ ಬಂದವರಿಗೆಲ್ಲಾ ಅದನ್ನು ತೋರಿಸುತ್ತೇನೆ. ಅದು 'ಕಾಸು, ಕೀರ್ತಿಗಳು ಗಳಿಸಲಾರದ ಲಾಭ'.

ಪ್ರತಿಕ್ರಿಯಿಸಿ: feedback@sudha.co.in